ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರಿನ ಮಹಾನಗರ ಪಾಲಿಕೆಯಲ್ಲಿ ಉಪ-ಆರೋಗ್ಯಾಧಿಕಾರಿಗಳ ಹುದ್ದೆಗಳ ಭರ್ತಿಯ ಬಗ್ಗೆ

೧೫೨೬. ಶ್ರೀ ಆರ್. ರೋಷನ್‌ಬೇಗ್ (ಶಿವಾಜಿನಗರ) —ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಮುಖ್ಯ ಅಭಿಯಂತರರು, ನಗರ ಯೋಜನೆ ಉಪ-ನಿರ್ದೇಶಕರು, ಎರಡು ಕಾರ್ಯಕಾರಿ ಅಭಿಯಂತರರು, ಎರಡು ಉಪ-ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ, ಆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಈಗಲಾದರು ಕ್ರಮ ತೆಗೆದು ಕೊಳ್ಳುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ಉಪ-ಆರೋಗ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇಲ್ಲ. ಇತರೇ ಹುದ್ದೆಗಳು ಸದ್ಯಕ್ಕೆ ಖಾಲಿ ಇವೆ. ಮುಖ್ಯ ಅಭಿಯಂತರ ಹುದ್ದೆಯನ್ನು ಇತ್ತೀಚೆಗೆ ತುಂಬಲಾಗಿದೆ.

ಆ) ಮುಖ್ಯ ಅಭಿಯಂತರ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರವು ನೇರ ನೇಮಕಾತಿ ಪ್ರಾಧಿಕಾರ ಆಗಿದೆ. ದಿನಾಂಕ ೨೧-೨-೧೯೮೬ ರಂದು ಒಬ್ಬ ಅಧಿಕಾರಿಯನ್ನು ಮುಖ್ಯ ಅಭಿಯಂತರನ್ನಾಗಿ ನೇಮಿಸಲಾಗಿದೆ. ಇತರೇ ಖಾಲಿ ಹುದ್ದೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಭರ್ತಿ ಮಾಡಬೇಕಾಗಿದೆ. ಎಷ್ಟು ತ್ವರಿತವಾಗಿ ಭರ್ತಿಮಾಡಲು ಸಾಧ್ಯವೋ ಅಷ್ಟು ತ್ವರಿತವಾಗಿ ಭರ್ತಿಮಾಡುವಂತೆ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಸೂಚಿಸಲಾಗುವುದು.

ಹೊಸಕೋಟೆ ಮತ್ತು ಮಾಲೂರು ಮಧ್ಯ ಓಡಾಡುತ್ತಿರುವ ಖಾಸಗಿ ಬಸ್ಸುಗಳ ಬಗ್ಗೆ

೧೬೧೧. ಶ್ರೀ ಹೆಚ್. ಬಿ. ದ್ಯಾವರಪ್ಪ.—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಹೊಸಕೋಟೆ ಮತ್ತು ಮಾಲೂರು ಮಧ್ಯ ಓಡಾಡುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ? ಹಾಗೂ ಈ ಎಲ್ಲಾ ಬಸ್ಸುಗಳು ಸದರಿ ರಸ್ತೆಯಲ್ಲಿ ಓಡಾಡಲು ಪಾಲ್ತಿಯಲ್ಲಿರುವ ಪರವಾನಿಗೆಗಳನ್ನು ಹೊಂದಿವೆಯೇ ?

ಆ) ಒಳಪ್ರದೇಶಗಳಿಗೆ ಓಡಾಡಲು ಪರವಾನಿಗೆ ಕೊಟ್ಟಿದ್ದರೂ ಸಹ ಹೆದ್ದಾರಿಗಳಲ್ಲಿ ಈ ಬಸ್‌ಗಳು ಓಡಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಇದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗುವುದಿಲ್ಲವೆ ?

ಇ) ಹೌದಾದಲ್ಲಿ, ಈ ಅಕ್ರಮ ಸಂಚಾರವನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮವೇನು ?

ಈ) ಕೋಲಾರ ಜಿಲ್ಲೆಯಲ್ಲಿನ ರಸ್ತೆಗಳನ್ನು ರಾಷ್ಟ್ರೀಕರಣಗೊಳಿಸಲು ಸರ್ಕಾರ ಪರಿಶೀಲಿಸುತ್ತಿದೆಯೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ೧. ೨೮
೨. ಹೌದು

ಆ) ಹೌದು

ಇ) ಅಂತಹ ಪ್ರಕರಣಗಳನ್ನು ಪತ್ತೆಹಚ್ಚಿದಾಗ ಮತ್ತು ಪ್ರಕರಣಗಳು ವರದಿಯಾದಾಗ ಪರವಾನಿಗೆದಾರರ ಹಾಗೂ ಚಾಲಕರ ವಿರುದ್ಧ ಕ್ರಮ ಜರುಗಿಸುವುದರ ಜೊತೆಗೆ ಪರವಾನಿಗೆಗಳನ್ನು ಮೋಟಾರು ವಾಹನಗಳ ಕಾಯಿದೆ ಅಧಿನಿಯಮ ೬೨ರ ಪ್ರಕಾರ ಅಮಾನತ್ತು ಅಥವಾ ರದ್ದುಗೊಳಿಸುವುದಕ್ಕೆ ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರಗಳು ಕ್ರಮ ತೆಗೆದುಕೊಳ್ಳುತ್ತಿವೆ. ಈ ಅಕ್ರಮ ಓಡಾಟವನ್ನು ತಡೆಗಟ್ಟಲು ಹೆಚ್ಚಿನ ಸೂಚನೆಗಳನ್ನು ನೀಡಲಾಗಿದೆ

ಈ) ಈಗಾಗಲೇ ಜಿಲ್ಲೆಯ ೮೭ ರಾಜ್ಯ ರಸ್ತೆಗಳನ್ನು ರಾಷ್ಟ್ರೀಕರಣಗೊಳಿಸಲಾಗಿದೆ. ಹಾಗೂ ಅಂತರ ರಾಜ್ಯ ಪರವಾನಿಗೆ ಹೊಂದಿರುವ ಪರವಾನಿಗೆದಾರರನ್ನೂ ಅವರ ಸೇವೆಯನ್ನು ಮುಂದುವರಿಸಲು ಈ ಯೋಜನೆಯ ಕರಾರು ಪ್ರಕಾರ ಅವಕಾಶ ಒದಗಿಸಲಾಗಿದೆ. ಆದರೆ ಅವರು ಗುರುತಿಸಿದ ರಸ್ತೆಯಲ್ಲಿ ಮೇಲೆ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದಾಗಲೀ ಅಥವಾ ಇಳಿಸುವುದಾಗಲೀ ಮಾಡಕೂಡದು.

ಕೊಟ್ಟೂರು ನಗರದ ಕೊಳಚೆ ಪ್ರದೇಶಗಳ ಬಗ್ಗೆ

೧೨೫೯ ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಕೊಟ್ಟೂರು ಪುರಸಭೆಯಿಂದ ಕೆಲವು ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಲು ಶಿಫಾರಸ್ಸು ಮಾಡಿರುವುದು ನಿಜವಲ್ಲವೆ ಹಾಗೂ ಈ ಬಗ್ಗೆ ಪ್ರಸ್ತಾವನೆಗಳನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಕಳಿಸಿಲ್ಲವೆ ?

ಆ) ಈ ಮೇಲೆ ಹೇಳಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲು ಮಂಡಳಿಯಿಂದ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಮೇಲೆ ಹೇಳಿದ ಪ್ರದೇಶಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ಗಳ ಆಯ್ಕೆಯ ಬಗ್ಗೆ

೧೩೦೩ ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹಾಯಕ ಸರ್ಕಾರಿ ಅಭಿಯೋಜಕರುಗಳನ್ನು ಆಯ್ಕೆಯಾಗಿದ್ದರೂ, ಕೆಲಸಕ್ಕೆ ಹಾಜರಾಗಲು ಆದೇಶ ನೀಡದೆ ಇರಲು ಕಾರಣಗಳೇನು ಹಾಗೂ ಯಾವಾಗ ಇವರಿಗೆ ಕೆಲಸಕ್ಕೆ ಹಾಜರಾಗಲು ಆದೇಶ ನೀಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ರಾಜ್ಯ ಮಂತ್ರಿಗಳು).—

ಆ) ಈಗಾಗಲೇ ದಿನಾಂಕ ೨೦-೨-೧೯೮೬ರಂದು ನೇಮಕ ಹಾಗೂ ತೈನಾತಿ ಆದೇಶಗಳನ್ನು ಹೊರಡಿಸಲಾಗಿದೆ.